ಮುಖದ ಮೇಲಿಂದ ತೆಗೆದಳು. ದಿಂಬನ್ನು ಎಳೆದುಕೊಂಡು ಹೊಟ್ಟೆಯ ಕೆಳಗೆ ತಳ್ಳಿಕೊಂಡಳು. ಮತ್ತು ಉದ್ದವೂ ಅಗಲವೂ ಆಗಿರುವ ಮಂಚದ ಮೇಲೆ ಎರಡೂ ಕೈಗಳನ್ನು ಚಾಚಿಕೊಂಡು ಕವುಚಿ ಮಲಗಿಕೊಂಡಳು. ಓಹ್! ಮುಂಜಾನೆ ತುಂಬ ಹೊತ್ತು ಮಲಗಿರುವುದರಲ್ಲಿ ಎಂಥ ಆನಂದವಿದೆ! ರಾಜನ್ ಇದ್ದರೆ ಆರು ಆರೂವರೆಗೆಲ್ಲಾ ಚಟರ್ ಪಟರ್ ಶುರುವಾಗಿಬಿಡುತ್ತಿತ್ತು. ಚಹಾನಾಸ್ಟಾದ ತಯ್ಯಾರಿ, ಮಧ್ಯಾಹ್ನದ ಊಟ ರೆಡಿಮಾಡಿ ಡಬ್ಬ ಕಟ್ಟಿಕೊಟ್ಟು, ಎಂಟು ಗಂಟೆಗೆ ರಾಜನ್ನನ್ನು ಆಫೀಸಿಗೆ ಬೀಳ್ಕೊಡುವುದು... ಬೆಳಿಗ್ಗೆ ರಾಜನ್‌ನಿಗೆ ಅಷ್ಟು ಬೇಗ ಏಳುವ ಗರಜು ಯಾಕೋ ಗೊತ್ತಿಲ್ಲ. ಆದರೆ, ಇಂದು ಆಕೆ ಸ್ವತಂತ್ರಳು! ಏನು ಬೇಕಾದರೂ ಮಾಡಿಕೊಳ್ಳಬಹುದು. ಆಕೆ ಇಡೀ ಶರೀರವನ್ನು ಸಡಿಲುಗೊಳಿಸಿಕೊಂಡಳು ಮತ್ತೆ ಆರಾಮಾಗಿ ಮಲಗುವ ತಯ್ಯಾರಿ ನಡೆಸಿದಳು.

ಮತ್ತೆ ಕಣ್ಣು ತೆರೆದಾಗ ಎಂಟು ಗಂಟೆಯಾಗಿ ಹೋಗಿತ್ತು. ಆಕೆ ಒಂದು ಲೊಟಾ ಚಹಾ

